# ಶಾತವಾಹನರ ಸಾಂಸ್ಕೃತಿಕ ಕೊಡುಗೆಗಳು

ಆಡಳಿತ ವ್ಯವಸ್ಥೆ : ಅರ್ಥಶಾಸ್ತ್ರದಲ್ಲಿ ನಿರೂಪಿಸಿದಂತೆ ರಾಜ್ಯವನ್ನು ಅಹರ ಅಥವಾ ರಾಷ್ಟ್ರಗಳಾಗಿ ವಿಂಗಡಿಸಲಾಗಿತ್ತು. ಒಂದೊಂದು ಅಹರದಲ್ಲಿಯೂ ನಿಗಮ ಎನಿಸಿದ ಒಂದಾದರೂ ಪಟ್ಟಣವಿರುತ್ತಿತ್ತು. ಗ್ರಾಮಗಳಂತೂ ರಾಜ್ಯದ ಜೀವನಾಡಿಗಳು. ಪ್ರತಿ ಅಹರಕ್ಕೂ ಅಮಾತ್ಯ ಮುಖ್ಯಾಧಿಕಾರಿಯಾಗಿ ನಿಯಮಿಸಲ್ಪಟ್ಟಿದ್ದ. ವಿಷ್ಣುಪಾಲಿತ, ಸ್ಯಮಕ ಮತ್ತು ಶಿವಸ್ಕಂಧ ದತ್ತರು, ಗೌತಮೀಪುತ್ರ ಶಾತಕರ್ಣಿ ಹಾಗೂ ಪುಳುಮಾವಿಯರ ಅಧೀನದಲ್ಲಿ ಗೋವರ್ಧನದ (ನಾಸಿಕ್) ಅಮಾತ್ಯರಾಗಿ ದ್ದರೆಂದು ತಿಳಿದಿದೆ. ರಾಜಾಮಾತ್ಯ ಎನಿಸಿದ ಅಧಿಕಾರಿಗಳು ಬಹುಶಃ ಇವರಿಗೂ ಮೇಲ್ದರ್ಜೆಯವರಾಗಿದ್ದು ಅರಸನ ಮಂತ್ರಿವರ್ಗಕ್ಕೆ ಸೇರಿದವ ರಾಗಿರಬಹುದು. ಭಾಂಡಾಗಾರಿಕಾ, ಹೇರಣಿಕ, ಮಹಾಸೇನಾಪತಿ, ಲೇಖಕ, ನಿಬಂಧಕ ಇವರು ಕೇಂದ್ರಾಡಳಿತದ ಇತರ ಪ್ರಮುಖ ಅಧಿಕಾರಿಗಳು. ಭಾಂಡಾಗಾರಿಕಾ ರಾಜ್ಯದ ಉಗ್ರಾಣಾಧಿಕಾರಿ. ಹೇರಣಿಕ ಬೊಕ್ಕಸದ ಅಧಿಕಾರಿ. ಲೇಖಕ ರಾಜ್ಯದ ಮುಖ್ಯ ಕಾರ್ಯದರ್ಶಿ ಇದ್ದಂತೆ. ರಾಜನ ಮೌಖಿಕ ಆಜ್ಞೆಗಳಿಗೆ ದಾಖಲೆಗಳ ಸ್ವರೂಪ ಕೊಟ್ಟು ಅವನ್ನು ಇತರ ಅಧಿಕಾರಿಗಳಿಗೆ ತಿಳಿಯಪಡಿಸುವ, ಕಾರ್ಯಗತಗೊಳಿಸುವ ಹೊಣೆಗಾರಿಕೆ ಈತನದಾಗಿತ್ತು. ಲೇಖಕ ಸಿದ್ಧಗೊಳಿಸಿದ ದಾಖಲೆಗಳನ್ನು ವ್ಯವಸ್ಥಿತವಾಗಿಡುವ ಕಾರ್ಯ ನಿಬಂಧಕನದು. ಲಭ್ಯವಿರುವ ಆಧಾರಗಳಿಂದ ರಾಜ್ಯದಲ್ಲಿ ಸುವ್ಯವಸ್ಥಿತವಾದ, ಕಾನೂನುಬದ್ಧವಾದ ಆಡಳಿತ ಪದ್ಧತಿ ಇದ್ದಿತೆಂದು ಸಹಜವಾಗಿ ಊಹಿಸಬಹುದು.

ರಾಜನ ನೇರವಾದ ಆಡಳಿತಕ್ಕೊಳಪಟ್ಟ ಭಾಗಗಳಲ್ಲದೆ ರಾಜನ ಸಾಮಂತರಾಗಿ ತಮ್ಮ ತಮ್ಮ ಪ್ರದೇಶಗಳ ಒಳಾಡಳಿತದಲ್ಲಿ ಸ್ವತಂತ್ರರಾಗಿದ್ದ ಮಹಾರಥಿ, ಮಹಾಭೋಜ ಎಂಬ ಹಲವು ಮಾಂಡಳಿಕರು ಕಂಡುಬರುತ್ತಾರೆ. ಮಹಾರಥಿಗಳು ಪಶ್ಚಿಮಘಟ್ಟಗಳ ಉತ್ತರ ಭಾಗದಲ್ಲಿಯೂ, ಮಹಾಭೋಜರು ಉತ್ತರ ಕೊಂಕಣ ಪ್ರದೇಶದಲ್ಲಿಯೂ ಆಳುತ್ತಿದ್ದರೆಂದು ಕಂಡುಬಂದಿದೆ. ಇವರು ಸ್ವತಂತ್ರರಾಗಿ ಭೂಮಿದಾನ ಮುಂತಾದವುಗಳನ್ನು ಮಾಡಬಹುದಾಗಿದ್ದರಿಂದ ಕೆಲವು ವೇಳೆ ಇವರು ತಮ್ಮದೇ ಆದ ನಾಣ್ಯಗಳನ್ನು ಸಹ ಅಚ್ಚುಹಾಕಿಸಿ ತಮ್ಮ ಆಡಳಿತ ಪ್ರದೇಶದಲ್ಲಿ ಚಲಾವಣೆಗೆ ತಂದಿದ್ದರು. ಶಾತವಾಹನರ ಪ್ರಾಬಲ್ಯ ಪಶ್ಚಿಮ ದಖನ್‌ನಲ್ಲಿ ಇಳಿಮುಖವಾದಾಗ ಬನವಾಸಿಯ ಸುತ್ತಲಿನ ಪ್ರದೇಶದಲ್ಲಿ ಚುಟುಗಳು ಸ್ವತಂತ್ರರಾಗಿ ಆಳುತ್ತಿದ್ದರು.

ರಾಜ್ಯದಲ್ಲಿ ಹಲವು ಪಟ್ಟಣಗಳೂ (ನಿಗಮ) ಅನೇಕ ಗ್ರಾಮಗಳೂ ಇದ್ದುವೆಂದು ಹೇಳಿದೆ. ಗ್ರಾಮವು ಆಡಳಿತದ ಅತಿ ಸಣ್ಣ ಘಟಕ. ಇದರ ಅಧಿಕಾರಿ ಗ್ರಾಮಿಣಿ. ಹಾಲನ ಗಾಥಾಸತ್ತಶತಿಯಲ್ಲಿ ಈ ಗ್ರಾಮಿಣಿಯು ಐದು ಅಥವಾ ಒಮ್ಮೊಮ್ಮೆ ಹತ್ತು ಗ್ರಾಮಗಳ ಅಧಿಕಾರಿಯಾಗಿದ್ದನೆಂದು ಹೇಳಿದೆ.

ವಿದೇಶ ವ್ಯಾಪಾರ ಬಹುಮಟ್ಟಿಗೆ ಅಭಿವೃದ್ಧಿ ಹೊಂದಿದ್ದ ಈ ಕಾಲದಲ್ಲಿ ಪೂರ್ವ ಹಾಗೂ ಪಶ್ಚಿಮ ತೀರಗಳಲ್ಲಿಯೂ ಒಳನಾಡಿನಲ್ಲಿಯೂ ಅನೇಕ ನಿಗಮಗಳಿದ್ದವು. ಭರುಕಚ್ಛ, ಸೋಪಾರ, ಕಲ್ಯಾಣ, ಕನ್ಹೇರಿ, ತಗರ, ಜನ್ನರ್, ಕಾರ್ಲೆ, ಗೋವರ್ಧನ ಮುಂತಾದವು ಇತರ ನಿಗಮಗಳು. ಇವುಗಳ ಆಡಳಿತ ಒಂದು ಸಭೆಗೆ (ನಿಗಮ ಸಭೆ) ಸೇರಿದ್ದಿತೆನ್ನಲು

ಆಧಾರಗಳಿವೆ. ಈ ಸಭೆಯ ಮೂಲಕ ಪ್ರಜೆಗಳು ತಮ್ಮ ಅಭಿಪ್ರಾಯಗಳನ್ನು ಸೂಚಿಸಬಹುದಾಗಿದ್ದಿತು. ಗ್ರಾಮ ಗಳಲ್ಲಿ ಗಹಪತಿಯೂ (ಬಹುಶಃ ಬೇಸಾಯಗಾರರ ಒಂದು ಸಂಘವೂ) ವ್ಯಾಪಾರಕೇಂದ್ರಗಳೆನಿಸಿದ ಪಟ್ಟಣಗಳಲ್ಲಿ ಸೇನಿ (ಶ್ರೇಣಿ) ಎಂಬ ವಣಿಕ ಸಂಘವೂ ತಮ್ಮ ಪ್ರಾಬಲ್ಯವನ್ನು ಬೆಳೆಸಿಕೊಂಡಿದ್ದುವು. ಈ ವಣಿಕ ಸಂಘ ಅನೇಕ ಸಂದರ್ಭಗಳಲ್ಲಿ ಆಧುನಿಕ ಬ್ಯಾಂಕ್‌ಗಳಂತೆ ಲೇವಾದೇವಿ ವ್ಯವಹಾರಗಳಲ್ಲಿ ನಿರತವಾಗಿದ್ದಿತು. ಈ ಸಂಘಗಳು ಹಲವಾರು ದತ್ತಿ ಗಳನ್ನು ಸ್ವೀಕರಿಸಿ ಅದರಿಂದ ಬರುವ ಬಡ್ಡಿಹಣದಲ್ಲಿ ದಾನಕಾರ್ಯಗಳನ್ನು ಮಾಡಬಹುದಾಗಿದ್ದಿತಲ್ಲದೆ ಮೂಲಧನವನ್ನು ವರ್ತಕ ಹಾಗೂ ಇತರರಿಗೂ ಸಾಲ ಕೊಡುವ, ತನ್ಮೂಲಕ ವ್ಯಾಪಾರಕ್ಕೆ ಬಂಡವಾಳ ವನ್ನೊದಗಿಸುವ ಸಂಸ್ಥೆಗಳಂತೆ ಕಾರ್ಯನಿರತವಾಗಿದ್ದವು. ಬೇಸಾಯಕ್ಕೂ ವಾಣಿಜ್ಯಕ್ಕೂ ಪೋಷಕವಾಗಿ ಇತರ ಅನೇಕ ವೃತ್ತಿಸಂಘಗಳೂ ಇದ್ದವು. ಶಾಸನಗಳಲ್ಲಿ ಕುಲರಿಕ (ಕುಂಬಾರ), ಒದಯಂತ್ರಿಕ, ತಿಲಪಿಸಕ (ಗಾಣಿಗ), ಧನ್ನಿಕ (ಧಾನ್ಯಗಳ ಮಾರಾಟಗಾರ), ಕೊಲಿಕ (ನೇಕಾರ), ವಸಕಾರ, ಕಸಕಾರ (ಕಾಸ್ಯಕಾರ) ಮುಂತಾದ ವೃತ್ತಿಗಾರರನ್ನು ಹೆಸರಿಸಿದೆ. ಈ ವೃತ್ತಿಸಂಘಗಳು ಶ್ರೇಣಿಧರ್ಮ ಗಳನ್ನು ಪಾಲಿಸುತ್ತಿದ್ದವು.

ಆರ್ಥಿಕ, ಸಾಮಾಜಿಕ ಸ್ಥಿತಿ: ಈ ಕಾಲದಲ್ಲಿ ವ್ಯಾಪಾರ ಬಹಳ ಅಭಿವೃದ್ಧಿಹೊಂದಿತ್ತು. ಪೆರಿಪ್ಲಸ್ ಆಫ್ ದಿ ಎರಿಥ್ರಿಯನ್ ಸೀ, ಟಾಲೆಮಿಯ ಭೂವಿವರಣೆಗಳಲ್ಲಿ ದಖನ್ ಪ್ರದೇಶದಿಂದ ರಫ್ತಾಗುತ್ತಿದ್ದ, ಇಲ್ಲಿನ ಜನ ಆಮದು ಮಾಡಿಕೊಳ್ಳುತ್ತಿದ್ದ ವಸ್ತುಗಳ ವಿವರಗಳನ್ನು ಕೊಟ್ಟಿದೆ. ಸುಗಂಧದ್ರವ್ಯಗಳು, ಹತ್ತಿ ಹಾಗೂ ರೇಷ್ಮೆಯ ಬಟ್ಟೆಗಳು, ಮೆಣಸು ಮುಂತಾದ ಸಂಬಾರ ಪದಾರ್ಥಗಳು, ದಂತ, ಅಗೇಟ್, ಕಾರ್ನಿಲಿಯನ್ ಮತ್ತು ಲೀಸಿಯಮ್ ಮುಂತಾದ ಪ್ರಶಸ್ತ ಶಿಲೆಗಳು ಮುಂತಾದವುಗಳನ್ನು ರಫ್ತುಮಾಡಿ ತಾಮ್ರ, ತವರ, ಸೀಸ, ಉತ್ತಮ ದರ್ಜೆಯ ಹಲವು ಬಗೆಯ ಮದ್ಯಪೇಯಗಳು, ಅಲಂಕಾರವಸ್ತುಗಳು, ಗಾಜು ಮುಂತಾದವುಗಳನ್ನು ಆಮದು ಮಾಡಿ ಕೊಳ್ಳುತ್ತಿದ್ದರು. ರೋಮ್ ದೇಶದೊಡನೆ ವಾಣಿಜ್ಯ ಸಂಬಂಧಗಳು ಉತ್ತಮವಾಗಿದ್ದವು. ದಖನ್ ಹಾಗೂ ದಕ್ಷಿಣ ಭಾರತದ ಅನೇಕ ಭಾಗಗಳಲ್ಲಿ ರೋಮನ್ ನಾಣ್ಯಗಳು ಲಭಿಸಿವೆ. ಅಲ್ಲದೆ ಬರ್ಮಾ, ಸುಮಾತ್ರ, ಅರಕಾನ್, ಚಂಪಾದೇಶಗಳೊಂದಿಗೂ ಈ ಕಾಲದ ವ್ಯಾಪಾರಿಗಳು ಸಂಪರ್ಕ ಹೊಂದಿದ್ದರು. ರೋಮನ್ನರೂ ಅರಬ್ಬರೂ ಪರದೇಶದ ವರ್ತಕರಲ್ಲಿ ಪ್ರಮುಖರು. ಕಾಹಾಪಾನಾ (ಕರ್ಪಾಪಣ) ಹಾಗೂ ಸುವರ್ಣವೆಂಬ ನಾಣ್ಯಗಳು ಚಲಾವಣೆಯಲ್ಲಿದ್ದರೂ ಅವುಗಳು ಮಿತವಾಗಿ ಉಪಯೋಗಿಸಲ್ಪಟ್ಟಂತೆ ತೋರುತ್ತದೆ. ತಾಮ್ರ, ಸೀಸ, ಪೊಟಿನ್, ಚಿನ್ನ, ಬೆಳ್ಳಿ-ಈ ಲೋಹಗಳ ನಾಣ್ಯಗಳು ಲಭಿಸಿವೆ. ಇವುಗಳಲ್ಲಿ ಯಾವ ಕಲಾತ್ಮಕ ವಿಶೇಷತೆಗಳು ಇಲ್ಲ. ಆದರೂ ಇತ್ತೀಚೆಗೆ ದೊರೆತ ಹಲವಾರು ನಾಣ್ಯಗಳಲ್ಲಿ ಶಾತವಾಹನ ಅರಸರ ಚಿತ್ರಗಳು ಕಾಣಿಸಿಕೊಂಡಿವೆ. ವಾಣಿಜ್ಯ ಅಭಿವೃದ್ಧಿ ಹೊಂದಿದ್ದರೂ ವ್ಯವಸಾಯ ಮುಖ್ಯ ಕಸುಬಾಗಿಯೇ ಉಳಿದಿತ್ತು. ಅರಸರು, ಜನರು ಮಾಡುತ್ತಿದ್ದ ಭೂದಾನ, ಗೋದಾನಗಳಿಂದ ಭೂಮಿಗೂ ಪಶುಗಳಿಗೂ ಇವರು ಕೊಟ್ಟಿದ್ದ ಪ್ರಾಶಸ್ತ್ಯ ಸ್ಪಷ್ಟವಾಗುತ್ತದೆ. ಬೆಳೆಯ ಷಡ್ಭಾಗ ರಾಜಾದಾಯಕ್ಕಾಗಿ ಹೋಗುತ್ತಿತ್ತು. ಉಪ್ಪನ್ನು ತಯಾರಿಸುವುದು ಬಹುಶಃ ಸರ್ಕಾರದ ಏಕಸ್ವಾಮ್ಯವಾಗಿತ್ತು.

ಸಮಾಜದಲ್ಲಿ ಪಿತೃಪ್ರಧಾನ ಅವಿಭಕ್ತ ಕುಟುಂಬ ಪದ್ಧತಿ ಜಾರಿಯಲ್ಲಿತ್ತು.

ಸ್ತ್ರೀ ಪ್ರಾಧಾನ್ಯತೆ:- ಶಾತವಾಹನ ಅರಸರ ಹೆಸರುಗಳ ಆರಂಭದಲ್ಲಿ ತಾಯಿಯ ಹೆಸರನ್ನು (ಗೌತಮೀಪುತ್ರ, ವಾಶಿಷ್ಠೀಪುತ್ರ ಇತ್ಯಾದಿ) ಬಳಸುತ್ತಿದ್ದರು. ಅದು ಮಾತೃಪ್ರಧಾನ ಪದ್ಧತಿಯ ಪರಿಣಾಮವಲ್ಲ. ಶಾಸನಗಳಲ್ಲಿ ಮೊದಲ ಸ್ಥಾನ ಪಿತೃವಿಗೆ, ಅನಂತರ ಮಾತೃ, ಗಂಡುಮಕ್ಕಳು, ಹೆಣ್ಣುಮಕ್ಕಳು ಈ ಕ್ರಮದಲ್ಲಿ ಸ್ಥಾನಗಳನ್ನು ಕೊಟ್ಟಿದೆ. ಹಾಗೆಂದಾಕ್ಷಣ ಸ್ತ್ರೀಯರಿಗೆ ಸಮಾಜದಲ್ಲಿ ಪ್ರಮುಖ ಸ್ಥಾನವಿರಲಿಲ್ಲವೆಂದೇನೂ ಅಲ್ಲ. ಅನೇಕ ಸ್ತ್ರೀದಾನಿ ಗಳು ಶಾಸನಗಳಲ್ಲಿ ಕಂಡುಬಂದಿದ್ದಾರೆ. ಪಿತೃಪ್ರಧಾನಪದ್ಧತಿ ಆರ್ಯೀ ಕರಣದ ಪ್ರಭಾವವೆನ್ನಬಹುದು.

ಉಡುಗೆ-ಆಭರಣಗಳು:- ಸಮಕಾಲೀನ ಶಾಸನಗಳನ್ನು, ಚಿತ್ರಗಳನ್ನು ಗಮನಿಸಿದಾಗ ಇವರ ಉಡುಗೆ ತೊಡುಗೆಗಳ ಬಗೆಗೆ ಹಲವಾರು ಅಂಶಗಳು ಗೋಚರವಾಗುತ್ತವೆ. ಸ್ತ್ರೀಯರು ಸೊಂಟದ ಕೆಳಗೆ ನೆರಿಗೆಹಿಡಿದ ಒಂದು ವಸ್ತ್ರವನ್ನುಡು ತ್ತಿದ್ದರು. ಬಲಗಡೆಗೆ ಗಂಟನ್ನು ಹಾಕಿಕೊಂಡು ಸ್ವಲ್ಪ ಚುಂಗನ್ನು ಕೆಳಗೆ ಬಿಡುತ್ತಿದ್ದರು. ಎದೆಯನ್ನು ಮುಚ್ಚಿಕೊಳ್ಳುವ ಪದ್ಧತಿ ಇನ್ನೂ ಬಂದಿರಲಿಲ್ಲವೆಂದು ತೋರುತ್ತದೆ. ಕಿವಿಗಳಿಗೆ ಉಂಗುರ, ಮೊಳಕೈವರೆಗೂ ಕೈತುಂಬ ಬಳೆಗಳು, ಕಂಠಹಾರಗಳು ಮತ್ತು ಕಡಗಗಳನ್ನು ಧರಿಸುತ್ತಿದ್ದರು. ಕಾಲುಗಳಿಗೆ ಕಾಲಂದಿಗೆಗಳನ್ನು ಸ್ತ್ರೀಪುರುಷರೆಲ್ಲರೂ ಧರಿಸುತ್ತಿದ್ದರು. ಗಂಡಸರು ಸೊಂಟದ ಕೆಳಗೆ ವಸ್ತ್ರವನ್ನು ಉಟ್ಟು ತಲೆಗೆ ರುಮಾಲನ್ನು ಸುತ್ತುತ್ತಿದ್ದರು. ಪುರುಷರೂ ಆಭರಣಗಳನ್ನು ತೊಡುತ್ತಿದ್ದರು. ಚಿನ್ನದ ಆಭರಣಗಳ ಮೇಲೆ ಇವರಿಗೆ ಹೆಚ್ಚಿನ ಒಲವು.

ಧರ್ಮ:- ಈ ಕಾಲದಲ್ಲಿ ವೈದಿಕಮತ ಪ್ರಧಾನ ಧರ್ಮವಾಗಿದ್ದಿತು. ಅರಸರು ವೈದಿಕಯಜ್ಞಯಾಗಾದಿಗಳನ್ನು ಮಾಡುತ್ತಿದ್ದರು. ವರ್ಣಾಶ್ರಮ ಧರ್ಮಗಳ ಪಾಲನೆ ಅವರ ಕರ್ತವ್ಯವಾಗಿತ್ತು. ಗೌತಮೀಪುತ್ರ ಶಾತಕರ್ಣಿಯು ವರ್ಣಸಂಕರವನ್ನು ತಡೆಯಲು ಯತ್ನಿಸಿದನೆಂಬುದು ಶಾಸನಗಳಿಂದ ತಿಳಿದ ವಿಷಯ. ಈವೇಳೆಗೆ ಪುರಾಣಗಳು ತಮ್ಮ ಅಂತಿಮ ರೂಪವನ್ನು ತಾಳಿದ್ದು ಪೌರಾಣಿಕ ದೇವತೆಗಳೆನಿಸಿದ ಇಂದ್ರ, ಸಂಕರ್ಷಣ, ವಾಸುದೇವ, ಚಂದ್ರ, ಸೂರ್ಯ, ಯಮ, ವರುಣ, ಕುಬೇರ, ಪಶುಪತಿ, ಗೌರಿ, ಲಕ್ಷ್ಮಿನಾರಾಯಣ ಮೊದಲಾದವರನ್ನು ಪೂಜಿಸುವ ಪರಿಪಾಠ ಬೆಳೆದು ಬಂದಿತ್ತು, ಪರದೇಶೀಯ ರೆನಿಸಿದ ಶಕ, ಪಹ್ಲವ, ಕುಷಾಣ ಮೊದಲಾದ ವರು ಸಹ ವೈದಿಕಮತದ ಪ್ರಭಾವಕ್ಕೊಳಗಾಗಿ ವೈದಿಕದೇವತೆಗಳೆನಿಸಿದ ಶಿವ ಮತ್ತು ವಿಷ್ಣುವನ್ನು ಪೂಜಿಸುತ್ತಿದ್ದರು. ಗೋದಾನ ಭೂದಾನಗಳು, ಕೆರೆ ಕಟ್ಟಿಸುವುದು, ಬಾವಿಗಳನ್ನು ತೋಡುವುದು, ಪ್ರಯಾಣಿಕರ ಸೌಕರ್ಯಕ್ಕಾಗಿ ಛತ್ರಗಳನ್ನು ಕಟ್ಟಿಸಿ ಊಟ ವಸತಿ ಸೌಕರ್ಯಗಳನ್ನೇರ್ಪಡಿ ಸುವುದು, ತೀರ್ಥಯಾತ್ರೆ ಮಾಡುವುದು ಪವಿತ್ರ ಕರ್ತವ್ಯಗಳೆನಿಸಿ ಕೊಂಡಿದ್ದವು.

ಈ ಕಾಲದಲ್ಲಿ ಜೈನ ಹಾಗೂ ಬೌದ್ಧಧರ್ಮಗಳು ಸಹ ಪ್ರಮುಖ ಧರ್ಮಗಳೆನಿಸಿದ್ದವು; ಬೌದ್ಧಧರ್ಮ ದಖನ್ನಿನ ಪೂರ್ವತೀರ ಪ್ರದೇಶಗಳಲ್ಲಿ ಬಹುಮಟ್ಟಿಗೆ ವ್ಯಾಪಿಸಿತ್ತು. ಜಗ್ಗಯ್ಯಪೇಟೆ, ಅಮರಾವತಿ ಮತ್ತು ಭಟ್ಟಿಪ್ರೋಲುಗಳಲ್ಲಿ ದೊರೆತ ಸ್ತೂಪಗಳಲ್ಲಿ ಸಾ.ಶ.ಪೂ.  2ನೆಯ ಶತಮಾನಕ್ಕೆ ಸೇರಿದ ಬ್ರಾಹ್ಮೀಲಿಪಿಯ ಶಾಸನಗಳು ಲಭಿಸಿವೆ. ಅಶೋಕನ ಶಾಸನಗಳು ಉತ್ತರ ಕರ್ನಾಟಕದ ಹಲವಾರು ಕಡೆ ಲಭಿಸಿರುವುದನ್ನು ಗಮನಿಸಿ ಆಪ್ರದೇಶಗಳು ಬೌದ್ಧಧರ್ಮ ಪ್ರಭಾವಕ್ಕೊಳಪಟ್ಟಿದ್ದುವೆಂದು ಹೇಳ ಬಹುದು. ಬನವಾಸಿ ಒಂದು ಪ್ರಮುಖ ಬೌದ್ಧಕೇಂದ್ರವಾಗಿದ್ದಿತು. ಅಶೋಕನ ಧರ್ಮಪ್ರಸಾರಕ್ಕಾಗಿ ಕಳುಹಿಸಿದ ಭಿಕ್ಷುಗಳಲ್ಲಿ ಕೆಲವರು ಬನವಾಸಿಗೆ ಬಂದಿದ್ದರೆಂದು ತಿಳಿದಿದೆ. ನಾಗಾರ್ಜುನಕೊಂಡದಲ್ಲಿ ದೊರೆತ ಬೌದ್ಧಶಾಸನಗಳಲ್ಲಿಯೂ

ಬನವಾಸಿಯಲ್ಲಿ ನೆಲಸಿದ್ದ ಬೌದ್ಧಭಿಕ್ಷುಗಳ ಪ್ರಸ್ತಾಪವಿದೆ. ಇತ್ತೀಚೆಗೆ ಬನವಾಸಿಯಲ್ಲಿ ನಡೆಸಿದ ಉತ್ಖನನದಲ್ಲಿ ಗಜಪೃಷ್ಠಾಕಾರದ ಕಟ್ಟಡದ ಅವಶೇಷಗಳು ಲಭಿಸಿವೆಯಾದರೂ ಅದು ಬೌದ್ಧ ಧರ್ಮಕ್ಕೆ ಸಂಬಂಧಿಸಿದುದೆಂದು ಖಚಿತವಾಗಿ ಹೇಳಲಾಗದು. ಲಭ್ಯ ಆಧಾರಗಳಿಂದ ಗುಲ್ಬರ್ಗ ಜಿಲ್ಲೆಯ ಸನ್ನತಿ ಒಂದು ಬೌದ್ಧ ಕೇಂದ್ರವಾಗಿದ್ದಿತೆಂದು ತಿಳಿದಿದೆ. ಅಲ್ಲಿ ಸಾ.ಶ.ಪೂ. 1ನೆಯ ಶತಮಾನದ ಬ್ರಾಹ್ಮೀ ಲಿಪಿಯ ಶಾಸನಗಳು ಲಭಿಸಿವೆ. ಇವುಗಳಿಂದ ಹೆಚ್ಚಿನ ವಿವರಗಳು ತಿಳಿಯದಿದ್ದರೂ ಇದು ಬೌದ್ಧಕೇಂದ್ರಗಳಲ್ಲೊಂದಾಗಿತ್ತೆಂದು ಇಲ್ಲಿ ದೊರೆತ ಅವಶೇಷಗಳಿಂದ ಊಹಿಸಬಹುದಾಗಿದೆ.

ವಾಸ್ತುಶಿಲ್ಪ: ದಕ್ಷಿಣ ಭಾರತದ ಬಹುಭಾಗವನ್ನು ಆಕ್ರಮಿಸಿದ್ದ ಶಾತವಾಹನರ ಆಳಿಕೆ ವಾಸ್ತುಶಿಲ್ಪಕ್ಕೆ ಬಹುಮುಖ್ಯವಾದ ತಿರುವುಕೊಟ್ಟ ಕಾಲ. ಇವರು ವೈದಿಕಮತಾವಲಂಬಿಗಳಾಗಿದ್ದರೂ ಬೌದ್ಧಧರ್ಮಕ್ಕೆ ಕೊಟ್ಟ ಪ್ರೋತ್ಸಾಹ ಅಪಾರ. ಹೊರದೇಶಗಳ ವ್ಯಾಪಾರಾಭಿವೃದ್ಧಿಯಿಂದಾಗಿ ಬೆಳೆದ ಶ್ರೀಮಂತವರ್ಗ ಹೇರಳವಾಗಿ ದಾನದತ್ತಿಗಳನ್ನು ಬಿಟ್ಟು ಅನೇಕ ಗುಹಾವಾಸ್ತುಗಳ ನಿರ್ಮಾಣಕ್ಕೆ ಕಾರಣವಾಯಿತು. ಜೊತೆಗೆ ಮಹಾಯಾನದ ಪ್ರಾಬಲ್ಯ ಮೂರ್ತಿಶಿಲ್ಪಕ್ಕೆ ಪ್ರಾಧಾನ್ಯತೆಯುಂಟಾಗಲು ಕಾರಣವಾಯಿತು. ಆದರೂ ಕರ್ನಾಟಕದಲ್ಲಿ ಈ ಕಾಲದ ವಾಸ್ತುಶಿಲ್ಪಗಳು ಉಳಿದುಬಂದಿರುವುದು ಅತ್ಯಲ್ಪ. ಬಹುಶಃ ಬೌದ್ಧಧರ್ಮಕ್ಕೆ ಕರ್ನಾಟಕದಲ್ಲಿ ಹೆಚ್ಚಿನ ಪ್ರೋತ್ಸಾಹ ದೊರೆಯದಿದ್ದುದು, ಸಮುದ್ರತೀರದಿಂದ ದೇಶದೊಳಕ್ಕೆ, ಶಾತವಾಹನರ ರಾಜಧಾನಿಗೆ, ಹಾದುಹೋಗುತ್ತಿದ್ದ ವ್ಯಾಪಾರಮಾರ್ಗ ಕರ್ನಾಟಕದ ಮೂಲಕ ಹೋಗದಿದ್ದುದು ಇದಕ್ಕೆ ಮುಖ್ಯ ಕಾರಣವಿರ ಬಹುದು. ಆಂಧ್ರದಲ್ಲಿ ಅದ್ಭುತವಾಗಿ ಬೆಳೆದ ಬೌದ್ಧ ಸ್ತೂಪ, ವಿಹಾರಗಳು ಕರ್ನಾಟಕದಲ್ಲಿ ಆ ಮಟ್ಟದಲ್ಲಿ ವ್ಯಾಪಿಸಲೇ ಇಲ್ಲ. ಈ ಗುಂಪಿಗೆ ಸೇರಿದ ಒಂದೇ ಒಂದು ಸ್ಥಳವೆಂದರೆ ಸನ್ನತಿ. ಇಲ್ಲಿ ಸ್ತೂಪಗಳಿದ್ದ ಕುರುಹು ಮಾತ್ರ ಉಳಿದಿದೆ.

ಕರ್ನಾಟಕದ ಬಹುಭಾಗ ಶಾತವಾಹನರ ನೇರ ಆಳಿಕೆಗೆ ಒಳಪಡದೆ ಇವರ ಸಾಮಂತರಾಗಿದ್ದ ಚುಟುಕುಲದ ಅರಸರು ಇಲ್ಲಿ ಆಳುತ್ತಿದ್ದುದರಿಂದ ಅವರಿಗೆ ಸಂಬಂಧಿಸಿದಂತೆ ಕೆಲವು ಸ್ಥಳಗಳಲ್ಲಿ ವಾಸ್ತುಶಿಲ್ಪಗಳ ಅವಶೇಷ ಗಳನ್ನು ಕಾಣಬಹುದು. ಚಿತ್ರದುರ್ಗದ ಬಳಿಯ ಚಂದ್ರವಳ್ಳಿ ಯಲ್ಲಿ ಅವರ ಕಾಲದ ವಾಸದ ಮನೆಗಳಿದ್ದ ಕುರುಹುಗಳು ಉತ್ಖನನಗಳಲ್ಲಿ ಕಂಡುಬಂದಿದ್ದರೂ ಅವುಗಳ ವಿನ್ಯಾಸ, ಇತರ ವಿವರಣೆಗಳು ಉಳಿದು ಬಂದಿಲ್ಲ. ಇಟ್ಟಿಗೆಯಿಂದ ಕಟ್ಟಿದ್ದ ಹಲವು ಕಟ್ಟಡಗಳಿದ್ದುವೆಂದು ಹೇಳಬಹುದು. ಇವಲ್ಲದೆ ಬೌದ್ಧ ಅಥವಾ ವೈದಿಕಧರ್ಮಕ್ಕೆ ಸೇರಿದ ಯಾವ ಕಟ್ಟಡವೂ ಅಲ್ಲಿ ಕಂಡುಬಂದಿಲ್ಲ; ಮೂರ್ತಿಗಳೂ ದೊರೆತಿಲ್ಲ. ನಿಗದಿಯಾದ ಪ್ರಮಾಣದ ಇಟ್ಟಿಗೆಗಳಿಗಿಂತ ಹೆಚ್ಚು ದೊಡ್ಡದಾದ ಇಟ್ಟಿಗೆಗಳೂ ಹೇರಳವಾಗಿ ದೊರೆತಿರುವುದರಿಂದ ಅವು ಅಲ್ಲಿದ್ದ ಕೋಟೆಯನ್ನು ಸೂಚಿಸುತ್ತವೆ ಎಂದು ಹೇಳಲಾಗಿದೆ.

ಲೌಕಿಕ ವಾಸ್ತುರೀತಿಗೆ ಸಂಬಂಧಿಸಿದಂತೆ ಶಾತವಾಹನರ ಕಾಲದ ಎರಡು ಕೋಟೆಗಳು ಒಂದು ಸನ್ನತಿಯಲ್ಲಿ, ಇನ್ನೊಂದು ಬನವಾಸಿಯಲ್ಲಿ ಉಳಿದುಬಂದಿವೆ. ಇವು ಇಟ್ಟಿಗೆಯಿಂದ ಕಟ್ಟಿದ ದಪ್ಪ ನೇರ ಗೋಡೆಗಳು. ವಡಗಾಂವ-ಮಾಧವಪುರದಲ್ಲಿ ಉತ್ಖನನಗಳಲ್ಲಿ ಕಂಡುಬಂದ ಚೌಕನಾದ ಅಥವಾ ದೀರ್ಘಚತುರಸ್ರಾಕಾರದ ವಾಸದ ಮನೆಗಳ ಅವಶೇಷಗಳನ್ನೂ ಇಲ್ಲಿ ಸೂಚಿಸಬಹುದು.

ಹಲವು ಅವಶೇಷಗಳುಳ್ಳ ಮತ್ತೊಂದು ಊರೆಂದರೆ ಬನವಾಸಿ. ಇಲ್ಲಿ ಇವರ ಕಾಲದಲ್ಲಿ ಬೌದ್ಧಧರ್ಮ ಪ್ರಬಲವಾಗಿದ್ದು ಹಲವು ಚೈತ್ಯಗಳು ಸ್ತೂಪಗಳು ಇದ್ದುದರ ಕುರುಹುಗಳನ್ನು ಕಾಣಬಹುದು. ಇಲ್ಲಿ ನಡೆದ ಉತ್ಖನನಗಳಿಂದ ಗಜಪೃಷ್ಠಾಕೃತಿಯ ಚೈತ್ಯಾಲಯವೊಂದಿದ್ದುದು ಪತ್ತೆಯಾಗಿದೆ. ಇದಕ್ಕೆ ತುಂಬ ದಪ್ಪವಾದ ಇಟ್ಟಿಗೆಗೋಡೆಯಿದ್ದು ಇಂಥ ಮೂರು ಗೋಡೆಗಳು ಒಂದನ್ನೊಂದು ಬಳಸಿ ಒಳಗೆ ಎರಡು ಪ್ರದಕ್ಷಿಣಾಪಥವನ್ನುಂಟುಮಾಡಿವೆ. ತಲವಿನ್ಯಾಸ ಮತ್ತು ಕೆಲವು ವರಸೆ ಇಟ್ಟಿಗೆಗಳನ್ನುಳ್ಳ ಗೋಡೆಗಳು ಮಾತ್ರ ಉಳಿದುಬಂದಿದ್ದು ಆ ಚೈತ್ಯಾಲಯದ ಪೂರ್ಣಸ್ವರೂಪ ತಿಳಿದುಬರುವಂತಿಲ್ಲ. ಚೈತ್ಯವಲ್ಲದೆ ಸ್ತೂಪಗಳೂ ಇಲ್ಲಿ ಇದ್ದಿರಬೇಕು. ಆದರೆ ಅವು ಅಲ್ಲಿರುವ ದಿಬ್ಬಗಳಲ್ಲಿ ಅಡಗಿರುವ ಸಾಧ್ಯತೆ ಇದೆ. ಸನ್ನತಿಯಲ್ಲಾದರೆ ಒಂದು ಗುಂಡಾದ ವಿನ್ಯಾಸದ ಸ್ತೂಪವಿದ್ದ ಕುರುಹುಮಾತ್ರ ಉಳಿದಿದ್ದು ಆ ಸ್ತೂಪ ಪೂರ್ತಿಯಾಗಿ ನಾಶವಾಗಿದೆ. ಅದರ ತಲವಿನ್ಯಾಸವನ್ನು ಮಾತ್ರ ಈಗ ಗುರುತಿಸಬಹುದು. ಇದು ಬಹುಮಟ್ಟಿಗೆ ಕಲ್ಲುತುಂಡುಗಳಿಂದ ನಿರ್ಮಿತವಾಗಿದ್ದು, ಮೇಲೆ ಶಿಲ್ಪಿತ ಶಿಲಾಫಲಕಗಳಿಂದ ಮುಚ್ಚಲ್ಪಟ್ಟಿದ್ದಿ ತೆಂದು ತೋರುತ್ತದೆ. ಈ ಸ್ತೂಪದ ಪೂರ್ಣಮಾದರಿ ಹೇಗಿತ್ತೆಂಬುದೂ ಈಗ ತಿಳಿದು ಬರುವಂತಿಲ್ಲ. ಬನವಾಸಿಯ ಶಾಸನ ಫಲಕವೊಂದರ ಮೇಲಿನ ಮತ್ತು ಸನ್ನತಿಯ ಸ್ತಂಭವೊಂದರ ಮೇಲಿನ ಚೈತ್ಯಾಕಾರದ ಕಮಾನಿನ ಅಲಂಕರಣಗ ಳಿಂದ ಆಗ ನಿರ್ಮಿತವಾಗಿದ್ದಿರ ಬಹುದಾದ ಚೈತ್ಯಾಲಯ ಅಥವಾ ವಿಹಾರಗಳ ಮಾದರಿಯನ್ನು ಗುರುತಿಸಬಹುದೇನೋ. ಬನವಾಸಿಯಲ್ಲಿ ವಿಹಾರವೊಂದನ್ನು ಕಟ್ಟಿಸಿದುದನ್ನು ಅಲ್ಲಿನ ಶಾಸನವೊಂದು ತಿಳಿಸುತ್ತದೆ. ಹಾಗೆಯೇ ಯುವಾನ್‌ಚಾಂಗ್ ಇಲ್ಲಿನ ಸ್ತೂಪ ಹಾಗೂ ವಿಹಾರಗಳನ್ನು ವರ್ಣಿಸಿದ್ದಾನೆ.

ಬೌದ್ಧವಾಸ್ತುವಲ್ಲದೆ ವೈದಿಕ ವಾಸ್ತುಗಳೂ ಶಾತವಾಹನರ ಕಾಲದಲ್ಲಿ ಇದ್ದುದಕ್ಕೆ ಸೂಚನೆಗಳಿವೆ. ಮಳವಳ್ಳಿಯ ಸ್ತಂಭಶಾಸನದಲ್ಲಿ ಮಳ್ಳಪಳ್ಳಿದೇವರ ಹೆಸರು ಬಂದರೆ, ತಾಳಗುಂದದ ಪ್ರಣವೇಶ್ವರ ದೇವರು ಶಾತಕರ್ಣಿಗಳಿಂದ ಪೂಜೆಗೊಂಡಂತೆಯೂ ತಿಳಿದುಬರುತ್ತದೆ. ಮೊದಲ ದೇವಾಲಯ ಈಗ ಉಳಿದು ಬಂದಿಲ್ಲ; ಎರಡನೆಯದರ ಮೂಲಸ್ವರೂಪ ಈಗ ತಿಳಿಯದು. ಐಹೊಳೆಯಲ್ಲಿ ಬಾದಾಮಿ ಚಳುಕ್ಯರಿಗಿಂತ ಮುಂಚೆ ಶಾತವಾಹನರ ಕಾಲದಲ್ಲಿಯೇ ಇಟ್ಟಿಗೆಯಿಂದ ನಿರ್ಮಿಸಿದ ವಾಸ್ತುರೂಪ ಗಳಿದ್ದುದು ಈಚೆಗೆ ಬೆಳಕಿಗೆ ಬಂದಿದೆ. ದೊಡ್ಡ ಮಂಟಪಗಳ ಮಾದರಿಯಲ್ಲಿ ಕಂಬಸಾಲುಗಳನ್ನು ಹೊಂದಿದ್ದ ಚೌಕಾಕಾರದ ಕಟ್ಟಡಗಳು ಅವಾಗಿರಬೇಕೆಂದು ಈಗ ಉಳಿದುಬಂದಿರುವ ತಲವಿನ್ಯಾಸದಿಂದ ಊಹಿಸಲಾಗಿದ್ದು ಅದು ಮುಂದೆ ಕೊಂತಿಗುಡಿ, ಲಾಡಖಾನ್ ಗುಡಿ ಮೊದಲಾದುವಕ್ಕೆ ಮಾದರಿಯಾಯಿತೆಂದು ಭಾವಿಸಲಾಗಿದೆ.

ಹೀಗೆ ಶಾತವಾಹನರ ಕಾಲದ ವಾಸ್ತುರೂಪಗಳು ಕರ್ನಾಟಕದಲ್ಲಿ ಪೂರ್ಣರೂಪದಲ್ಲಿ ಉಳಿದು ಬಂದಿಲ್ಲದಿದ್ದರೂ ಇದ್ದುದರಲ್ಲಿ ಶಿಲ್ಪ ಸ್ವರೂಪವೇ ಸ್ವಲ್ಪಮಟ್ಟಿಗೆ ಬೆಲೆ ಕಟ್ಟಬಹುದಾದ ಸ್ಥಿತಿಯಲ್ಲಿದೆ. ಬನವಾಸಿ ಯಲ್ಲಿ ದೊರೆತ ಕೆಲವು ಕಿರುಪ್ರಮಾಣದ ಮೃಣ್ಮೂರ್ತಿಗಳು, ಸನ್ನತಿಯಲ್ಲಿ ದೊರೆತ ಇದೇ ಕಾಲದ ಮೃಣ್ಮೂರ್ತಿಗಳು ಈ ಕಲೆ ಸಾಕಷ್ಟು ಪ್ರಬುದ್ಧ ಸ್ಥಿತಿಯಲ್ಲಿದ್ದುದನ್ನು ಸೂಚಿಸುತ್ತದೆ. ಯಕ್ಷಯಕ್ಷಿಯರಾಗಲಿ, ಪ್ರಾಣಿಗಳಾಗಲಿ ಸ್ವಾಭಾವಿಕವಾಗಿದ್ದು ಅವುಗಳ ಗುಣ ಸ್ವಭಾವಗಳನ್ನು ಚೆನ್ನಾಗಿ ವ್ಯಕ್ತಪಡಿಸುವಂತಿವೆ. ಅಚ್ಚಿನಲ್ಲಿ ಒತ್ತಿ ಮಾಡಿದ ಈ ಮೂರ್ತಿಗಳು ಒಳಗೆ ಟೊಳ್ಳಾಗಿರುವುದೇ

ಹೆಚ್ಚು. ಬನವಾಸಿಯಲ್ಲಿ ದೊರೆತ ನಾಗರ ಕಲ್ಲಿನ ಶಿಲ್ಪ ಶಾತವಾಹನರ ಕಾಲದ ಶಿಲಾಶಿಲ್ಪ ಮಾದರಿಗೆ ಉತ್ತಮ ಉದಾಹರಣೆ. ಸನ್ನತಿಯಲ್ಲಿ ದೊರೆತ ನಾಗರ ಕಲ್ಲುಗಳೂ ಇದರಂತೆಯೇ ಇದ್ದು, ಅರೆಯುಬ್ಬಿ ಬಿಡಿಸಿರುವ ನಾಗ ಸುಳಿಸುಳಿಯಾಗಿ ಸುತ್ತಿಕೊಂಡು ತನ್ನ ಐದು ಹೆಡೆಗಳನ್ನು ತೆರೆದಿದೆ. ಈ ಶಿಲ್ಪದಲ್ಲಿ ಗಂಭೀರತೆಯಿದೆ, ಭವ್ಯತೆ ಇದೆ. ಬನವಾಸಿಯ ನಾಗರಕಲ್ಲನ್ನು ಕಂಡರಿಸಿದ ನಟಕ ಅಥವಾ ನರ್ತಕ ಎಂಬ ಶಿಲ್ಪಿಯ ಹೆಸರೂ ಉಳಿದುಬಂದಿದ್ದು ಈಗ ತಿಳಿದಿರುವ ಮಟ್ಟಿಗೆ ಕರ್ನಾಟಕದ ಆದ್ಯರೂವಾರಿ ಇವನೆಂದು ಪರಿಗಣಿಸಬಹುದು. ಸನ್ನತಿಯಲ್ಲಿ ದೊರೆತ ಕೆಲವು ಶಿಲ್ಪಗಳಲ್ಲಿನ ಪ್ರಾಣಿಗಳನ್ನು ಅತ್ಯಂತ ಸ್ವಾಭಾವಿಕವಾಗಿ ಬಿಡಿಸುವ ಪ್ರಯತ್ನವಿದೆ. ಗಾಡಿಗೆ ಕಟ್ಟಿದ ಎತ್ತುಗಳಾಗಲಿ, ಸಂತೋಷದಿಂದ ಚಿಮ್ಮುತ್ತಿರುವ ಕೋಣವಾಗಲಿ, ಪಿತಾಲ್‌ಖೋರ ಮೊದಲಾದೆಡೆ ಇರುವಂತೆ ರೆಕ್ಕೆಹೊಂದಿದ ಕುದುರೆಯಾಗಲಿ ಕಂಡರಿಸುವಲ್ಲಿ ಶಿಲ್ಪನೈಪುಣ್ಯ ವಿದೆ. ಇವೆಲ್ಲಕ್ಕಿಂತ ಮಾನವ ಸಂವೇದನೆ, ಅಂತರ್ಭಾವಗಳನ್ನು ಹೊಮ್ಮಿಸುವ ಸನ್ನತಿಯಲ್ಲಿನ ಹಲವಾರು ಶಿಲ್ಪಗಳು ಈ ಕಾಲದ ಶ್ರೇಷ್ಠಮಟ್ಟದ ಶಿಲ್ಪ ಪ್ರತೀಕಗಳು. ಇವುಗಳಲ್ಲಿ ಅತ್ಯುತ್ತಮ ಮಾದರಿ ಯೆಂದರೆ ಆಯಕಸ್ತಂಭವೊಂದರ ಮೇಲೆ ಬಿಡಿಸಿರುವ ದಂಪತಿ ಶಿಲ್ಪ. ಬೌದ್ಧ ಜಾತಕಗಳ ಮೂಲಕ ಕಥನಶಿಲ್ಪ ಕರ್ನಾಟಕದಲ್ಲಿ ಆರಂಭವಾದುದೂ ಈ ಕಾಲದಲ್ಲಿಯೇ. ಕಾಲದ ಪೂರ್ಣರೂಪದ ಮೂರ್ತಿಗಳು ದೊರೆತಂತಿಲ್ಲ. ಐಹೊಳೆಯಲ್ಲಿ ಬುದ್ಧನ ಭಗ್ನಮೂರ್ತಿಯೊಂದು ದೊರೆತಿದ್ದು ಅದು ಶಾತವಾಹನರ ಕಾಲದ್ದೆನ್ನಲಾಗಿದೆ. ಈಚೆಗೆ ಹಂಪೆಯ ಉತ್ಖನನದಲ್ಲಿ ದೊರೆತಿರುವ ಈ ಕಾಲದ ಗಚ್ಚಿನ ಬೋಧಿಸತ್ವನ ತಲೆಯೊಂದು ಕುತೂಹಲವನ್ನು ಕೆರಳಿಸುವಂತಿದೆ. ಸುಣ್ಣಕಲ್ಲಿನಲ್ಲಿ ತೆಳುವುಬ್ಬಿನಲ್ಲಿ ಬಿಡಿಸಿರುವ ಶಿಲ್ಪಗಳು ಬೆರಗುಗೊಳಿಸುವಂಥವು.

ನಾಣ್ಯಗಳು : ಕೃಷ್ಣಾ, ಗೋದಾವರಿ ಪ್ರದೇಶ, ಮಾಳವ, ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕಗಳ ಹಲವಾರು ಕಡೆಗಳಲ್ಲಿ ಶಾತವಾಹನರ ವಿವಿಧ ನಾಣ್ಯಗಳು ಅಪಾರವಾಗಿ ದೊರೆತಿವೆ. ಅವುಗಳ ರಚನೆ, ಅವುಗಳ ಮೇಲಿನ ಚಿತ್ರಾಲಂಕರಣ ಮತ್ತು ಅವುಗಳಿಗಾಗಿ ಬಳಸಲಾದ ಲೋಹ ಇವುಗಳಲ್ಲಿ ವೈವಿಧ್ಯತೆ ಕಂಡುಬರುತ್ತದೆ. ಪೊಟಿನ್, ಸೀಸ, ತಾಮ್ರ ಮತ್ತು ಬೆಳ್ಳಿಯ ನಾಣ್ಯಗಳನ್ನು ಅವರು ಅಚ್ಚುಹಾಕಿಸಿದ್ದಾರೆ. ಆದರೆ ಸೀಸ ಮತ್ತು ಪೊಟಿನ್ ನಾಣ್ಯಗಳೇ ಹೆಚ್ಚು. ವಿದೇಶ ಹಾಗೂ ಸುತ್ತಲಿನ ಪ್ರದೇಶಗಳನ್ನು ಹೊರತುಪಡಿಸಿ ಅನ್ಯತ್ರ ದೊರಕಿರುವುದು ಹೆಚ್ಚಾಗಿ ಅಚ್ಚುಹಾಕಿದವುಗಳೇ. ಸಾಮಾನ್ಯವಾಗಿ ಈ ನಾಣ್ಯಗಳ ಮೇಲೆ ಬ್ರಾಹ್ಮೀಲಿಪಿಯಲ್ಲಿ ಆಲೇಖ್ಯಗಳಿದ್ದು, ಇನ್ನೊಂದು ಮುಖದಲ್ಲಿ ಸಿಂಹ, ಆನೆ, ಕುದುರೆ, ಬಾಣ, ಬೆಟ್ಟ ಮುಂತಾದ ಚಿತ್ರಗಳಿರುತ್ತವೆ. ಆಕಾರದಲ್ಲಿ ಇವು ಬಹುಮಟ್ಟಿಗೆ ದುಂಡು. ದಪ್ಪದಾದ ಈ ನಾಣ್ಯಗಳ ವ್ಯಾಸ 1.5", 0.9" ಮತ್ತು 0.6". ಅರಸರ ಹೆಸರುಗಳನ್ನು ನಾಣ್ಯಗಳಲ್ಲಿ ಮೂಡಿಸಿದ್ದರೂ ಒಂದೇ ಹೆಸರಿನ ಹಲವಾರು ಅರಸರು ಈ ವಂಶದಲ್ಲಿರುವ ಕಾರಣ ಅವರನ್ನು ಗುರುತಿಸುವುದು ಕಷ್ಟವಾಗಿದೆ.

ಬನವಾಸಿಯ ಉತ್ಖನನದಲ್ಲಿ ಗೌತಮೀಪುತ್ರ ಶಾತಕರ್ಣಿಯ ಅನೇಕ ನಾಣ್ಯಗಳೂ ಯಜ್ಞಶ್ರೀ ಶಾತಕರ್ಣಿಯ ಒಂದೆರಡು ನಾಣ್ಯಗಳೂ ದೊರೆತಿವೆ. ಬನವಾಸಿಯಲ್ಲಿ ದೊರೆತ ನಾಣ್ಯಗಳು ಸೀಸದಿಂದ ಮಾಡಲ್ಪಟ್ಟಿದ್ದು. ಇವುಗಳ ವ್ಯಾಸ ಸಾಮಾನ್ಯವಾಗಿ 0.6". ಇವುಗಳ ಮುಮ್ಮುಖ ಸವೆದಿದ್ದರೂ ಹಿಮ್ಮುಖದಲ್ಲಿ ಉಜ್ಜಯಿನಿ ಚಿಹ್ನೆ ಇದೆ. ಚಂದ್ರವಳ್ಳಿಯಲ್ಲಿ ವಾಶಿಷ್ಠೀಪುತ್ರ ಪುಳುಮಾವಿ ಮತ್ತು ಯಜ್ಞಶ್ರೀ ಶಾತಕರ್ಣಿಯರ ನಾಣ್ಯಗಳು ದೊರೆತಿವೆ. ಪುಳುಮಾವಿಯ ನಾಣ್ಯದ ಒಂದು

ಮುಖದಲ್ಲಿ ಸೊಂಡಿಲು ಮೇಲಕ್ಕೆತ್ತಿದ ಆನೆಯ ಚಿತ್ರ ಮತ್ತು ಬ್ರಾಹ್ಮೀಲಿಪಿಯಲ್ಲಿ ಪುಳುಮಾವಿ ಎಂಬ ಆಲೇಖ್ಯವಿದೆ. ಹಿಮ್ಮುಖದಲ್ಲಿ ಉಜ್ಜಯಿನಿ ಚಿಹ್ನೆಯಿದ್ದು, ಅದರ ಒಂದೊಂದು ವೃತ್ತದಲ್ಲಿ ಒಂದೊಂದು ಗೂಡು ಇದೆ. ಯಜ್ಞಶ್ರೀ ಶಾತಕರ್ಣಿಯ ನಾಣ್ಯಗಳೂ ಹೀಗೇ ಇವೆ. ಒಂದು ನಾಣ್ಯದಲ್ಲಿ ಆ ಸಿರಿಯನ ಸತಾ ಎಂಬ ಆಲೇಖ್ಯವೂ ಇನ್ನೊಂದರಲ್ಲಿ ನಸತಕ . . . ಎಂಬ ವಿಲೇಖ್ಯವೂ ಇದೆ. ಪೊಟಿನ್ ನಾಣ್ಯವೊಂದರಲ್ಲಿ ಹಕು ಶ್ರೀ ಎಂಬ ಆಲೇಖ್ಯವಿರುವುದನ್ನೂ ಇನ್ನೊಂದು ಸೀಸದ ನಾಣ್ಯದಲ್ಲಿ ಶ್ರೀಸದಕ ಎಂಬ ಆಲೇಖ್ಯವಿರುವುದನ್ನೂ ಎಂ.ಎಚ್.ಕೃಷ್ಣ ಅವರು ಗುರುತಿಸಿದ್ದಾರಾದರೂ ಈ ರಾಜರು ಯಾರು ಎಂಬುದನ್ನು ಗುರುತಿಸಲಾಗಿಲ್ಲ. (ಜಿ.ಬಿ.ಆರ್.)

ವರ್ಗ: ಮೈಸೂರು ವಿಶ್ವವಿದ್ಯಾನಿಲಯ ವಿಶ್ವಕೋಶ